**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref**: 29/2021

ಎಂ. ಡಬ್ಲ್ಯೂ-1

**ದಿನಾಂಕ 24.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ ಎಲ್.ಎಂ.ಪಿ. ವಕೀಲರಿಂದಃ**

ನಾವು ಕಾರ್ಖಾನೆಯನ್ನು ವಿಕೃತಮಾಲಾ ಗ್ರಾಮದಲ್ಲಿ ಪ್ರಾರಂಭ ಮಾಡಿಲ್ಲ. ಎಲೆಕ್ಟ್ರಾನಿಕ್ ಮ್ಯಾನುಫ್ಯಾಕ್ಚರಿಂಗ ಕ್ಲಸ್ಟರ್, ತಿರುಪತಿಯಲ್ಲಿ ನಾವು ಕಾರ್ಖಾನೆಯನ್ನು ಪ್ರಾರಂಭ ಮಾಡಿರುತ್ತೇವೆ. ನಾವೇ ನೀಡಿರುವ ವಿಳಾಸದ ಪ್ರಕಾರ ನಮ್ಮ ಕಾರ್ಖಾನೆಯು ವಿಕೃತಮಾಲಾ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ ಎಂದರೆ ಸಾಕ್ಷಿ ಅದು ವಿಕೃತಮಾಲಾ ವ್ಯಾಪ್ತಿಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ನಾವು ಸ್ಥಾಪನೆ ಮಾಡಿರುವ ಕಾರ್ಖಾನೆಯ ಕ್ಲಸ್ಟರ್ ತಿರುಪತಿಯಿಂದ 14 ಕಿ.ಮೀ. ದೂರದಲ್ಲಿದೆ ಎಂದರೆ ಸಾಕ್ಷಿ 7-10 ಕಿ.ಮೀ. ದೂರದಲ್ಲಿ ಇರಬಹುದು ಎಂದು ಉತ್ತರಿಸಿರುತ್ತಾರೆ. ನಮ್ಮ ದಾಖಲೆಗಳಲ್ಲಿ ನಾವು ಸದರಿ ಕಾರ್ಖಾನೆ ತಿರುಪತಿಯಿಂದ 14 ಕಿ.ಮೀ. ದೂರದಲ್ಲಿದೆ ಎಂದು ತಿಳಿಸಿರುತ್ತೇವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ.

ನಮ್ಮ ಕಾರ್ಖಾನೆಯನ್ನು ನಡೆಸಲು ನಾವು ಪರವಾನಿಗೆಯನ್ನು ಪಡೆದುಕೊಂಡಿರುತ್ತೇವೆ. ಸದರಿ ದಾಖಲೆಯನ್ನು ನಿ.ಎಂ.405 ಎಂದು ಹಾಜರುಪಡಿಸಲಾಗಿರುತ್ತದೆ. ನಮ್ಮ ಸಂಸ್ಥೆಗೆ ಪರವಾನಿಗೆಯನ್ನು ನೀಡಿದ ದಿನಾಂಕ 22.06.2018 ಎಂದರೆ ಸಾಕ್ಷಿ ಹೌದು ಎಂದು ಹೇಳಿರುತ್ತಾರೆ. ಪರವಾನಿಗೆ ಪಡೆಯುವುದಕ್ಕೆ ಮುಂಚೆಯೇ ನಾವು ನಮ್ಮ ಸುಮಾರು 94 ಜನ ಕಾರ್ಮಿಕರನ್ನು ನಾವು ವರ್ಗಾವಣೆ ಮಾಡಿದ್ದೆವು ಎಂದರೆ ಸಾಕ್ಷಿ ಎ.ಪಿ.ಐ.ಎಸ್.ಸಿ.ರವರ ಜೊತೆ ಕರಾರು ಮಾಡಿಕೊಂಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಚಿತ್ತೂರಿನಿಂದ ಬಂದು ಕಾರ್ಖಾನೆಗೆ ಭೇಟಿ ನೀಡಬೇಕಾಗಿತ್ತು, ಆದ್ದರಿಂದ ಎ.ಪಿ.ಐ.ಎಸ್.ಸಿ. ಕರಾರಿನಂತೆ ನಾವು ಸದರಿ ಕಾರ್ಮಿಕರನ್ನು

ವರ್ಗಾವಣೆ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಮ್ಮ ಕಾರ್ಖಾನೆಗೆ ಇನ್ಸಪೆಕ್ಟರರವರ ಕಡೆಯಿಂದ ಪರವಾನಿಗೆ ಪಡೆಯುವುದಕ್ಕಿಂತ ಮುಂಚೆಯೇ ಕಾರ್ಮಿಕರನ್ನು ವರ್ಗಾವಣೆ ಮಾಡಿ ವರದಿ ಮಾಡಿಕೊಳ್ಳಲು ತಿಳಿಸಿರುತ್ತೇವೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ನಾವು ಕಾರ್ಖಾನೆಗೆ ಪರವಾನಿಗೆ ಪಡೆದುಕೊಂಡ ನಂತರ ವಿದ್ಯುಚ್ಛಕ್ತಿ ಸರಬರಾಜಿಗೆ ಅನುಮತಿಯನ್ನು ಕೋರಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಎ.ಪಿ.ಐ.ಎಸ್.ಸಿ.ರವರು ನಮಗೆ ವಿದ್ಯುಚ್ಛಕ್ತಿಯ ಸಂಪರ್ಕವನ್ನು ಕಾರ್ಖಾನೆ ಪ್ರಾರಂಭ ಮಾಡಿದ ದಿನದಿಂದಲೂ ನವುಗೆ ನೀಡಿದ್ದರು. ಕಾರ್ಖಾನೆಯನ್ನು ನಾವು ಜೂನ್ 2018 ರಂದು ಪ್ರಾರಂಭ ಮಾಡಿರುತ್ತೇವೆ. ಪರವಾನಿಗೆ ಪಡೆದುಕೊಳ್ಳುವುದಕ್ಕಿದಂತ ಮುಂಚೆ ಕಾರ್ಖಾನೆ ಪ್ರಾರಂಭ ಮಾಡಿದ್ದೀರಾ ಅಥವಾ ಪರವಾನಿಗೆ ಪಡೆದುಕೊಂಡ ನಂತರ ಪ್ರಾರಂಭ ಮಾಡಿದ್ದೀರಾ ಎಂದರೆ ಆಂಧ್ರಪ್ರದೇಶದಲ್ಲಿ ಪರವಾನಿಗೆ ಪಡೆಯಲು ಅರ್ಜಿಯನ್ನು ಸಲ್ಲಿಸಿದ ನಂತರ ಕಾರ್ಖಾನೆಯನ್ನು ಪ್ರಾರಂಭ ಮಾಡಬಹುದು ಎಂಬ ನಿಯಮ ಇದ್ದುದ್ದರಿಂದ ನಾವು ಕಾರ್ಖಾನೆಯನ್ನು ಪ್ರಾರಂಭಿಸಿದ್ದೆವು ಎಂದು ಉತ್ತರಿಸಿರುತ್ತಾರೆ.

ಎ.ಪಿ.ಐ.ಎಸ್.ಸಿ.ರವರು ನಮಗೆ ಕಾರ್ಖಾನೆ ನಡೆಸಲು ವಿದ್ಯುಚ್ಛಕ್ತಿಯನ್ನು ನೀಡದೇ ಕಾರ್ಖಾನೆ ಮುಚ್ಚಬೇಕು ಎಂದು ಹೇಳಿ ನೀಡಿದ ನೊಟೀಸ್ ಗೆ ನಾವು ತಕರಾರು ಸಲ್ಲಿಸಿ ಆಂಧ್ರ ಪ್ರದೇಶದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾವು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಸಿಂಗಲ್ ಫೇಸ್ ವಿದ್ಯುಚ್ಛಕ್ತಿಯನ್ನು ನೀಡಿದ್ದು, 3 ಫೇಸ್ ವಿದ್ಯುಚ್ಛಕ್ತಿ ಯನ್ನು ಒದಗಿಸಲು ನಾವು ಬೇಡಿಕೆ ಸಲ್ಲಿಸಿದ್ದೆವು ಎಂದು ಹೇಳುತ್ತಾರೆ. ಎ.ಪಿ.ಐ.ಎಸ್.ಸಿ. ಷರತ್ತು ಗಳನ್ನು ಪಾಲಿಸದೇ ಇದ್ದುದ್ದರಿಂದ, ಅಲ್ಲಿ ಯಾವುದೇ ಉತ್ಪಾದನೆಯನ್ನು ಪ್ರಾರಂಭ ಮಾಡದೇ ಹಾಗೂ ಶೇಕಡಾ 80 ಉದ್ಯೋಗವನ್ನು ಸ್ಥಳೀಯರಿಗೆ ನೀಡಬೇಕು ಎಂಬ ನಿಯಮವನ್ನು ಪಾಲನೆ ಮಾಡಿರುವುದಿಲ್ಲ ಎಂದು ನಮಗೆ ಎ.ಪಿ.ಐ.ಎಸ್.ಸಿ.ರವರು ನೊಟೀಸ್ ನೀಡಿದ್ದರು

ಎಂದರೆ, ಸಾಕ್ಷಿ ನೊಟೀಸ್ ನೀಡಿದ್ದರು, ಅದರಲ್ಲಿದ್ದ ವಿಚಾರಗಳು ಸುಳ್ಳಾಗಿದ್ದ ಕಾರಣ ನಾವು ಅದನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೆವು ಎಂದು ಹೇಳುತ್ತಾರೆ. ನಮ್ಮ ಉತ್ಪಾದನೆಯನ್ನು ಪ್ರಾರಂಭಿಸಬೇಕಾದರೆ 3 ಫೇಸ್ ವಿದ್ಯುಚ್ಛಕ್ತಿಯ ಅಗತ್ಯ ಇತ್ತು, ಅದನ್ನು ನೀಡದೇ ಇದ್ದ ಕಾರಣ ನಾವು ಉತ್ಪಾದನೆ ಪ್ರಾರಂಭ ಮಾಡಿಲ್ಲ ಎಂದು ಆಂಧ್ರ ಪ್ರದೇಶದ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಿಳಿಸಿರುತ್ತೇವೆ ಎಂದರೆ ಹೌದು. ನಮಗೆ ಉತ್ಪಾದನೆಯನ್ನು ಪ್ರಾರಂಭಿಸಲು ವಿದ್ಯುಚ್ಛಕ್ತಿ ಇಲ್ಲದೇ ಇದ್ದರೂ ಕೂಡ ಹಾಗೂ ನಮಗೆ ಸಂಬಂಧಪಟ್ಟ ಇನ್ಸಪೆಕ್ಟರರವರು ಪರವಾನಿಗೆ ನೀಡದೇ ಇದ್ದರೂ ಕೂಡ ನಾವು 94 ಜನ ಕಾರ್ಮಿಕರನ್ನು ಮೈಸೂರಿನಿಂದ ವಿಕೃತಮಾಲಾ ಗ್ರಾಮದ ನಮ್ಮ ಘಟಕಕ್ಕೆ ವರ್ಗಾವಣೆ ಮಾಡಿರುತ್ತೇವೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ಮೈಸೂರಿನಿಂದ ವರ್ಗಾವಣೆಯಾದ ಕಾರ್ಮಿಕರು ಮುಷ್ಕರ ಮಾಡುತ್ತಿದ್ದು ಅದನ್ನು ರದ್ದು ಮಾಡಬೇಕು ಎಂದು ಕೋರಿ ಸಂಬಂಧಪಟ್ಟ ಕಾರ್ಮಿಕ ಇಲಾಖೆಗೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಹೌದು. ಸದರಿ ಮುಷ್ಕರವನ್ನು ನಿಷೇಧ ಮಾಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ. ನಾವು ಸಲ್ಲಿಸಿದ್ದ ಅರ್ಜಿಯಲ್ಲಿ ಯಾವುದಾದರೂ ಸಂಧಾನ ನಡೆದಿತ್ತಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಮುಷ್ಕರ ವನ್ನು ನಿಲ್ಲಿಸಲು ಸಂಬಂಧಪಟ್ಟ ಕಾರ್ಮಿಕ ಇಲಾಖೆಯವರು ಕಾರ್ಮಿಕರಿಗೆ ತಿಳಿಸಿದ ಬಗ್ಗೆ ದಾಖಲೆ ಗಳಲ್ಲಿ ನಮೂದು ಇರುತ್ತದೆಯಾ ಎಂದರೆ ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಕಡತಗಳನ್ನು ಪರಿಶೀಲಿಸಿ ನೋಡಿ ನಂತರ ಸದರಿ ದಾಖಲೆ ನ್ಯಾಯಾಲಯದ ಕಡತಗಳಲ್ಲಿ ಈಗ ಕಂಡು ಬರುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಕಾರ್ಮಿಕ ಇಲಾಖೆಯವರು ದಿನಾಂಕ 03.09.2018

ರಂದು ಭೇಟಿ ನೀಡಿದ್ದರು. ಸದರಿ ಭೇಟಿ ನೀಡಿದ್ದ ಬಗ್ಗೆ ಸಾಬೀತುಪಡಿಸಲು ನಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ಕಾರ್ಮಿಕ ಇಲಾಖೆಯಿಂದ ನಮ್ಮ ಕಾರ್ಖಾನೆಗೆ ದಿನಾಂಕ 06.09.2018 ರಂದು ಭೇಟಿ ಮಾಡಿದ್ದರು, ಆ ಸಮಯದಲ್ಲಿ ನಮ್ಮ ಕಾರ್ಖಾನೆಯ ಯಾವುದೇ ಅಧಿಕಾರಿ ಅಥವಾ ಪ್ರತಿನಿಧಿಗಳು ಅಲ್ಲಿ ಯಾರು ಇರಲಿಲ್ಲ ಎಂದರೆ ಸಾಕ್ಷಿ ದಿನಾಂಕ 05.09.2018 ರಿಂದ ನಾವು Suspension of Factory Operation ಮಾಡಿದ್ದೆವು ಮತ್ತು ನಾವು ಕಾರ್ಮಿಕ ಇಲಾಖೆಗೆ ನಮ್ಮ ಸಂಸ್ಥೆಯಲ್ಲಿ ಈ ರೀತಿ ನಡೆಯುತ್ತಿದೆ ತೀರ್ಮಾನ ಮಾಡಿಕೊಡಿ ಎಂದು ತಿಳಿಸಿದ್ದೆವು ಎಂದು ಉತ್ತರಿಸಿರುತ್ತಾರೆ. ಕಾರ್ಮಿಕರ ದುರ್ನಡತೆಗೆ ಸಂಬಂಧಪಟ್ಟಂತೆ ಅವರಿಗೆ ನೊಟೀಸ್ ಏನಾದರೂ ನೀಡಿದ್ದೀರಾ ಎಂದರೆ ಸಾಕ್ಷಿ ಸುಮಾರು 70 ಕ್ಕೂ ಹೆಚ್ಚು ಜನ ಮುಷ್ಕರದಲ್ಲಿ ತೊಡಗಿದ್ದ ಕಾರಣ ನಾವು ಆ ರೀತಿ ನೊಟೀಸನ್ನು ಕೊಡಲು ಆಗಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಕಾರ್ಮಿಕರು ನಮಗೆ ವಾಟ್ಸಪ್ ಮೂಲಕ ಸಂದೇಶವನ್ನು ಕಳಿಸಿ ಅವರುಗಳು ಕೆಲಸಕ್ಕೆ ಹಾಜರಾಗಿದ್ದ ಬಗ್ಗೆ ನಮಗೆ ತಿಳಿಸುತ್ತಿದ್ದರು ಎಂದರೆ ಸಾಕ್ಷಿ ವಾಟ್ಸಪ್ ಸಂದೇಶ ಬರುತ್ತಿತ್ತು ಆದರೆ ವಿಷಯ ಅದು ಇರಲಿಲ್ಲ ಎಂದು ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಕಾರ್ಮಿಕರುಗಳೆಲ್ಲ ನಾವು ಕೆಲಸಕ್ಕೆ ದಿನ ಹಾಜರಾಗುತ್ತಿದ್ದೆವು ಎಂದು ರಜಿಸ್ಟರ ಪೋಸ್ಟ ಮೂಲಕ ಪತ್ರ ಕಳುಹಿಸಿದ್ದರು ಎಂದರೆ ಸಾಕ್ಷಿ ರಜಿಸ್ಟರ ಪೋಸ್ಟ ಬಂದಿತ್ತು ಆದರೆ ಕೆಲಸಕ್ಕೆ ಹಾಜರಾಗುತ್ತಿದ್ದ ಬಗ್ಗೆ ಅದರಲ್ಲಿ ಯಾವುದೇ ಮಾಹಿತಿ ಇರಲಿಲ್ಲ. ಸಾಕ್ಷಿ ಮುಂದುವರೆದು ಸದರಿ ಪತ್ರದಲ್ಲಿ ಸಂಸ್ಥೆಯ ಬಗ್ಗೆ ಹೆಚ್ಚು ಆರೋಪಗಳನ್ನು ಮಾಡಿರುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ವಾಟ್ಸಪ್ ಮೂಲಕ ಬಂದ ಸಂದೇಶಗಳ ಬಗ್ಗೆ ನಮ್ಮಲ್ಲಿ ದಾಖಲೆ ಲಭ್ಯ ಇರುವುದಿಲ್ಲ. ರಜಿಸ್ಟರ ಪೋಸ್ಟ ಮೂಲಕ ಬಂದಿದ್ದ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಅದು ಈ ಪ್ರಕರಣಕ್ಕೆ ಸಂಬಂಧ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಎ.ಪಿ.ಐ.ಎಸ್.ಸಿ.ರವರ ಷರತ್ತುಗಳನ್ನು 2 ನೇ ಪಕ್ಷಗಾರರು ಪಾಲಿಸದೇ ಇದ್ದುದ್ದರಿಂದ ಕಾರ್ಖಾನೆಯನ್ನು ವಾಪಸ್ ಪಡೆದುಕೊಳ್ಳುತ್ತಿದ್ದೆವು ಎಂದು ಹೇಳಿ ಕಾರ್ಮಿಕರಿಗೆ ಮಾಹಿತಿಯನ್ನು ಕೊಟ್ಟಿದ್ದರು, ಆದ್ದರಿಂದ ಕಾರ್ಮಿಕರು ತಾತ್ಕಾಲಿಕವಾಗಿ ಮೈಸೂರಿಗೆ ಬಂದು ಪುನಃ ದಿನಾಂಕ 17.09.2018 ಕ್ಕೆ ಕೆಲಸಕ್ಕೆ ಹಾಜರಾಗಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ 17.09.2018 ರಿಂದ ಕಾರ್ಮಿಕರು ದಿನನಿತ್ಯ ನಮಗೆ ಕೆಲಸಕ್ಕೆ ಹಾಜರಾಗುತ್ತಿದ್ದೇವೆ ಎಂದು ಪತ್ರಗಳನ್ನು ಬರೆಯುತ್ತಿದ್ದರು, ಕೆಲಸ ಕೊಡಿ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು Suspension of Factory Operation ಆಗಿತ್ತು ಎಂದು ಉತ್ತರಿಸಿರುತ್ತಾರೆ. ಕಾರ್ಮಿಕರು ಇದೇ ರೀತಿಯಾಗಿ ದಿನನಿತ್ಯ ಕೆಲಸಕ್ಕೆ ಹಾಜರಾಗಿ ನಮಗೆ ಪತ್ರಗಳನ್ನು ಬರೆಯುತ್ತಿದ್ದರು ಎನ್ನುವುದು ಸುಳ್ಳು. ದಿನಾಂಕ 06.10.2018 ರವರೆಗೂ ನಮಗೆ ಕೆಲಸವನ್ನು ನೀಡದೇ ಇದ್ದ ಪಕ್ಷದಲ್ಲಿ ದಿನಾಂಕ 08.10.2018 ಕ್ಕೆ ಮೈಸೂರು ಘಟಕಕ್ಕೆ ಕೆಲಸಕ್ಕೆ ಹಾಜರಾಗುತ್ತೇವೆ ಎಂದು ಪತ್ರ ಬರೆದಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ಸದರಿ ಪತ್ರವನ್ನು ನಮಗೆ ರಜಿಸ್ಟರ ಪೋಸ್ಟ ಮೂಲಕ ಕಳುಹಿಸಿದ್ದರು ಎಂದರೆ ಆ ರೀತಿ ಯಾವುದೇ ಪತ್ರ ನಮಗೆ ಕಳುಹಿಸಿಲ್ಲ ಎಂದು ಹೇಳುತ್ತಾರೆ. ಆ ರೀತಿ ಪತ್ರ ಬರೆದಿದ್ದ ಕಾರಣ ದಿನಾಂಕ 08.10.2018 ರಂದು ನಾವು ಪೊಲೀಸ್ ಸಿಬ್ಬಂದಿಗಳನ್ನು ಇಟ್ಟು ಭದ್ರತೆ ಕೈಗೊಂಡಿದ್ದೆವು ಎಂದರೆ ಸಾಕ್ಷಿ ಇನಜಂಕ್ಷನ್ ದಾವೆ ಇದ್ದು ಅದರಲ್ಲಿ ಆಗಿದ್ದ ಆದೇಶದ ಪ್ರಕಾರ ನಾವು ಪೊಲೀಸ ಭದ್ರತೆಯ ಸಹಾಯದೊಂದಿಗೆ ಎಚ್ಚರಿಕೆಗಳನ್ನು ತೆಗೆದುಕೊಂಡಿದ್ದೆವು ಎಂದು ಉತ್ತರಿಸಿರುತ್ತಾರೆ.

ದಿನಾಂಕ 08.10.2018 ರಂದು ಕೆಲಸಕ್ಕೆ ಹಾಜರಾಗಿದ್ದ ಕಾರ್ಮಿಕರನ್ನು ಕರೆಸಿ ನಾವು ಮಾತುಕತೆ ಏನು ನಡೆಸಿಲ್ಲ ಹಾಗೂ ಅವರಿಗೆ ಕೆಲಸವನ್ನು ಸಹ ನೀಡಿರಲಿಲ್ಲ ಎಂದರೆ ಸಾಕ್ಷಿ ಅವರು ತಿರುಪತಿಯಲ್ಲಿ ಕೆಲಸ ಮಾಡುವ ಕಾರ್ಮಿಕರು ನೀವು ಮೈಸೂರು ಘಟಕದಿಂದ ಬಿಡುಗಡೆ ಆಗಿರುತ್ತೀರಿ ಎಂದು ತಿಳಿಸಿದ್ದೆವು ಎಂದು ಉತ್ತರಿಸಿರುತ್ತಾರೆ. ಕೆಲಸಕ್ಕೆ ಹಾಜರಾಗಿದ್ದ ಕಾರ್ಮಿಕರಿಗೆ

ನಾವು ಮೈಸೂರಿನಲ್ಲೂ ಕೆಲಸ ನೀಡದೇ ಹಾಗೂ ತಿರುಪತಿಯಲ್ಲೂ ಕೆಲಸ ನೀಡದೇ ಇದ್ದ ಕಾರಣ ಅವರು ಶಾಂತಿಯುತವಾಗಿ ಅವರು ಮೈಸೂರಿನ ಕಾರ್ಖಾನೆಯಲ್ಲಿ ಕೆಲಸಕ್ಕೆ ಹಾಜರಾಗುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಅವರು ನಮ್ಮ ಮೈಸೂರಿನ ಕಾರ್ಖಾನೆ ಮುಂದು ಮುಷ್ಕರ ಮಾಡುತ್ತಿದ್ದರು ಎಂದು ಹೇಳಿರುತ್ತಾರೆ.

ನಾವು ಅವರಿಗೆ ಕೆಲಸವನ್ನು ನೀಡದೇ ಇದ್ದ ಕಾರಣ ಕಾರ್ಮಿಕರುಗಳು ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಿದ್ದರು ಎಂದು ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ತದನಂತರ ಕಾರ್ಮಿಕರು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ನಂತರ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಸಂಧಾನ ಸಭೆ ನಡೆದಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ನಡೆದಿದ್ದ ಸಭೆಗೆ ನಾನು ಸಹ ಹಾಜರಾಗಿದ್ದೆ ಎಂದರೆ ಸಾಕ್ಷಿ ನಾನು ತುಂಬಾ ಸಭೆಗಳಿಗೆ ಹಾಜರಾಗಿದ್ದೆ ಎಂದು ಉತ್ತರಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ನಡೆದಿದ್ದ ಸಭೆಯಲ್ಲಿ ನೀವು ಹಾಜರಾಗಿದ್ದೀರಾ ಎಂದರೆ ಸಾಕ್ಷಿ ನಾನು ಕಡತವನ್ನು ನೋಡಿ ಉತ್ತರಿಸಬೇಕಾಗುತ್ತದೆ ಎಂದು ಹೇಳಿರುತ್ತಾರೆ. ದಿನಾಂಕ 07.01.2019 ರಂದು ಆ ಸಂಬಂಧ ಒಂದು ಸಂಧಾನ ಸಭೆ ನಡೆದು ಅಲ್ಲಿ ಒಡಂಬಡಿಕೆ ಕೂಡ ಆಗಿತ್ತು ಎಂದರೆ ಸಾಕ್ಷಿ ಆ ಸದರಿ ದಿನಾಂಕದಲ್ಲಿ ಸಂಧಾನ ಸಭೆಗೆ ಕರೆದಿದ್ದರು ಆದ್ದರಿಂದ ನಾನು ಆ ಸಭೆಗೆ ಹೋಗಿದ್ದೆ ಎಂದು ಉತ್ತರಿಸಿರುತ್ತಾರೆ. ಸದರಿ ಒಂದು ಷರತ್ತಿನ ಮೇರೆಗೆ ದಿನಾಂಕ 10.01.2019 ರಂದು ಸುಮಾರು 60 ಜನ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಈ ವಿಚಾರದಲ್ಲಿ ಅವರು ನಮಗೆ ಪತ್ರವನ್ನು ಕೂಡ ನೀಡಿ ಕೆಲಸಕ್ಕೆ ಹಾಜರಾಗಿದ್ದರು ಎಂದರೆ ಸುಳ್ಳು. ಬೆಂಗಳೂರಿನಲ್ಲಿದ್ದ ಕಾರ್ಮಿಕ ಆಯುಕ್ತರು ಮತ್ತು ಉಪ-ಕಾರ್ಮಿಕ ಆಯುಕ್ತರಿಗೂ ಕೂಡ ಮಾಹಿತಿಯನ್ನು ನೀಡಿ ಅವರು ಕೆಲಸಕ್ಕೆ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ

16.01.2019 ರಂದು, ದಿನಾಂಕ 07.01.2019 ರ ಒಡಂಬಡಿಕೆ ಪ್ರಕಾರ ಸುಮಾರು 60 ಜನ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದರು ಎಂದು ಸರಿಯಲ್ಲ. ದಿನಾಂಕ 07.01.2019 ರಂದು ಆಗಿದ್ದ ಒಡಂಬಡಿಕೆ ಪ್ರಕಾರ ಮಹಿಳಾ ಕಾರ್ಮಿಕರು ಮೈಸೂರು ಘಟಕದಲ್ಲಿ ಕೆಲಸ ನಿರ್ವಹಿಸಲು ಹೇಳಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಒಡಂಬಡಿಕೆ ಪ್ರಕಾರ ತಿರುಪತಿಯಲ್ಲಿ ಹಾಜರಾಗಿದ್ದ ಕಾರ್ಮಿಕರಿಗೆ ಸುಮಾರು ರೂ.1,800/- ಸಂಬಳವನ್ನು ಹೆಚ್ಚಿಸಿದ್ದೆವು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ಜನವರಿ 2019 ರಿಂದ ಮಾರ್ಚ 2020 ರವರೆಗೂ ವಿಕೃತಮಾಲಾ ಗ್ರಾಮದಲ್ಲಿದ್ದ ಕಾರ್ಖಾನೆಯಲ್ಲಿ ಕಾರ್ಮಿಕರುಗಳು ಕೆಲಸಕ್ಕೆ ಹಾಜರಾಗುತ್ತಿದ್ದರು ಎಂದರೆ ಸಾಕ್ಷಿ ನಾವು Suspension of Factory Operation revoke ಮಾಡಿದ್ದೆವು ಅದ್ದರಿಂದ ಅವರು ಕೆಲಸಕ್ಕೆ ಹಾಜರಾಗಿದ್ದರು ಎಂದು ಉತ್ತರಿಸಿರುತ್ತಾರೆ. ಬೆಂಗಳೂರಿನಲ್ಲಿದ್ದ ಉಪ ಕಾರ್ಮಿಕ ಆಯುಕ್ತರು ಹಾಗೂ ತಿರುಪತಿಯ ಜಂಟೀ ಕಾರ್ಮಿಕ ಆಯುಕ್ತರ ಪ್ರಕಾರ ಷರತ್ತುಗಳನ್ನು ನಾವು ಪಾಲಿಸಿದ್ದೇವೆ ಆದರೆ ವೇತನ ಪಾವತಿ ಕಾಯ್ದೆ ಅಡಿಯಲ್ಲಿ ಹಾಕಿದ್ದ ಅರ್ಜಿಯನ್ನು ಹಿಂಪಡೆದು ಕೊಳ್ಳುತ್ತಿದ್ದೇವೆ ಎಂದು ಹೇಳಿ ನಾವು ದೂರನ್ನು ಡಿ.ಎಲ್.ಸಿ. ಬೆಂಗಳೂರು ಹಾಗೂ ತಿರುಪತಿಯ ಕಾರ್ಮಿಕ ಅಧಿಕಾರಿಗಳಿಗೆ ಕೊಟ್ಟಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. 94 ಜನ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಔದ್ಯಮಿಕ ನ್ಯಾಯಾಲಯದಲ್ಲಿದ್ದ ಪ್ರಕರಣವನ್ನು ಮುಕ್ತಾಯಗೊಳಿಸಲು ನಾವು ಮೆಮೋ ಸಲ್ಲಿಸಿದ್ದೆವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಮಾಲೀಕರು ದಿನಾಂಕ 07.01.2019 ರ ಒಡಂಬಡಿಕೆಯನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ಹೇಳಿ ಉಪ ಕಾರ್ಮಿಕ ಆಯುಕ್ತರ ಇಲಾಹೆಯಲ್ಲಿ ಕಾರ್ಮಿಕರು ಅರ್ಜಿಯನ್ನು ಸಲ್ಲಿಸಿದ್ದ ಮೇರೆಗೆ ಉಪ ಕಾರ್ಮಿಕ ಆಯುಕ್ತರ ಬಳಿ ಸಂಧಾನ ಸಭೆ ನಡೆದಿತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ ನಮಗೆ ಸಭೆಗೆ ಹಾಜರಾಗಲು ಕರೆದಿದ್ದರು ಆದರೆ ಸದರಿ

ಸಭೆಯು ಸಂಧಾನ ಸಭೆಗೆ ಸಂಬಂಧಪಟ್ಟಿದ್ದು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸಭೆಯಲ್ಲಿ ನಾನು ಮಹಿಳಾ ಕಾರ್ಮಿಕರಿಗೆ ನಾವು ಕೆಲಸ ಕೊಟ್ಟಿರುತ್ತೇವೆ ಒಡಂಬಡಿಕೆಯನ್ನು ಉಲ್ಲಂಘನೆ ಮಾಡಿಲ್ಲ ಎಂದು ಲಿಖಿತವಾಗಿ ಕೊಟ್ಟಿದ್ದೆವು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಶ್ರೀ ಎಲ್.ಎಂ.ಪಿ. ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**